***C.C.No. 1439/2025***
***PW:01***

**ಸಾಕ್ಷಿಯನ್ನು ದಿಃ *<u>09/12/2025</u>* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ ಜಿಆರಎಸ ವಕೀಲರಿಂದ ಆರೋಪಿ ಪರವಾಗಿ.**

ನಾನು ಪಿಯುಸಿವರೆಗೆ ಓದಿರುತ್ತೇನೆ. ನಾನು ಪೌಲ್ಟ್ರಿ ವ್ಯಾಪಾರ ಮಾಡುತ್ತೇನೆ, ಅದರಂತೆ ಮೌಂಸದ ಅಂಗಡಿ ಸಹ ಇರುತ್ತದೆ. ಸದರಿ ಎರಡು ವ್ಯಾಪಾರಕ್ಕೆ ನನಗೆ ಪರವಾನಿಗೆ ಇರುತ್ತದೆ ಮತ್ತು ನಾನೇ ನಡೆಸುತ್ತೇನೆ. ಸದರಿ ಪರವಾನಿಗೆ ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರ. ನಾನು 2019-20 ನೇ ವರ್ಷದ ಆದಾಯ ತೆರಿಗೆ ತುಂಬಿರುತ್ತೇನೆ, ಸದರಿ ದಾಖಲೆ ಹಾಜರುಪಡಿಸಿಲ್ಲ. ಆರೋಪಿತರಿಗೆ ನೀಡಿರುವ ಸಾಲದ ಕುರಿತು ನಾನು ಆದಾಯ ತೆರಿಗೆ ವಿವರಗಳ ಪಟ್ಟಿಯಲ್ಲಿ ಉಲ್ಲೇಖ ಮಾಡಿಲ್ಲ.

ಆರೋಪಿತರು ನನಗೆ 20 ವರ್ಷಗಳಿಂದ ಪರಿಚಯ. ಈ ಮೊದಲು ಸಹ ಆರೋಪಿತರಿಗೆ ನನಗೆ ಹಣಕಾಸಿನ ವ್ಯವಹಾರವಿತ್ತು ಎಂದರೆ ನಿಜ. ಈ ಪ್ರಕರಣದ ಹಣದ ಮೊತ್ತ 2019 ನೇ ಇಸ್ವಿಯಲ್ಲಿ ಒಟ್ಟು 6,50,000/-ಗಳನ್ನು ನಗದು ರೂಪದಲ್ಲಿ ನಮ್ಮ ಅಂಗಡಿಯಲ್ಲಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಇಬ್ಬರೂ ಪ್ರಸ್ತುತವಿದ್ದರು, ಅದರಲ್ಲಿ ಒಬ್ಬರು ತೀರಿಹೋಗಿದ್ದಾರೆ, ಮೆಹಬೂಬಅಲಿ ಜೀವಂತವಿರುತ್ತಾರೆ. ಸದರಿಯವರ ನುಡಿ ಸಾಕ್ಷ ಮಾಡಿಸಲು ನನಗೆ ಅಭ್ಯಂತರವಿಲ್ಲ ಎಂದರೆ ನಿಜ.

ಸಾಲವಾಗಿ ನೀಡಿದ್ದೇನೆ ಎಂದು ಹೇಳಲಾದ 6,50,000/-ಗಳು ಯಾವ ಮೂಲದಿಂದ ಬಂತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ದಿನನಿತ್ಯದ ವ್ಯವಹಾರ 2-3 ಲಕ್ಷ ರೂಪಾಯಿಗಳು ಇರುತ್ತದೆ, ಅದ್ದರಿಂದ ವ್ಯಾಪಾರದ ಮೊತ್ತವನ್ನು ಸಾಲವಾಗಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಈ ರೀತಿ 6,50,000/-ಗಳಲ್ಲಿ ಬೇರೆಯವರಿಂದ ಪಡೆದ ಕೈಗಡ ಸಾಲ ಸಹ ಒಳಗೊಂಡಿದೆ. ಮೂರುವರೆದಿಂದ ನಾಲ್ಕು ಲಕ್ಷ ರೂಪಾಯಿಗಳು ನನ್ನದು ಇದ್ದು ಮಿಕ್ಕಿದ ಮೊತ್ತ ಮೆಹಬೂಬಅಲಿ ಇವರಿಂದ ಪಡೆದುಕೊಂಡಿದ್ದು ಇರುತ್ತದೆ. ಸದರಿ ಮೊತ್ತವನ್ನು ಬ್ಯಾಂಕ ಮುಖಾಂತರ ನೀಡಬಹುದಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಆರೋಪಿತರದು ಹೌಸಿಂಗ ಲೋನ ಇತ್ತು, ಖಾತೆಗೆ ಜಮೆ ಮಾಡಿದರೆ ಅದು ಕಡಿತಗೊಳ್ಳುತ್ತದೆ ಎಂದು ಹೇಳಿದಕ್ಕೆ ನಗದು ರೂಪದಲ್ಲಿ ಕೊಟ್ಟಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ಆರೋಪಿತರಿಗೆ 6,50,000/- ಸಾಲವಾಗಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲವು

ಎಷ್ಟು ಅವಧಿಯಲ್ಲಿ ಮರುಪಾವತಿ ಮಾಡುತ್ತಾರೆ ಎಂದು ಹೇಳಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮರುಪಾವತಿ ಮಾಡುತ್ತೇನೆಂದು 2-3 ವರ್ಷಗಳ ಕಾಲ ಮುಂದೂಡಿದ್ದು ಇದ್ದು, ನಂತರ 8 ಲಕ್ಷ ರೂಪಾಯಿಗಳಿಗೆ ಚೆಕ್ಕ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ.

ಆರೋಪಿತರಿಗೆ 2020 ನೇ ಇಸ್ವಿಯಲ್ಲಿ ಪುನಃ ಒಂದುವರೆ ಲಕ್ಷ ರೂಪಾಯಿಗಳ ಸಾಲ ಪಡೆದಿದ್ದು ಇರುತ್ತದೆ. ಮೊದಲನೇ ಸಾಲಕ್ಕೆ ಮತ್ತು ಈ ಸಾಲಕ್ಕೆ ಆರು ತಿಂಗಳ ಅಂತರವಿರುತ್ತದೆ. 6,50,000/- ಸಾಲವನ್ನು 5-6 ತಿಂಗಳಲ್ಲಿ ಮರುಪಾವತಿ ಮಾಡುತ್ತೇನೆ ಎಂದು ಹೇಳಿರುತ್ತಾರೆ. ಈ ರೀತಿ ಮರುಪಾವತಿ ಮಾಡದೇ ಪುನಃ ಒಂದುವರೆ ಲಕ್ಷ ರೂಪಾಯಿ ಸಾಲ ಕೊಟ್ಟಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆರೋಪಿತರು ಸಂಕಷ್ಟ ಸ್ಥಿತಿಯಲ್ಲಿರುವ ಕಾರಣ ಪುನಃ ಸಾಲ ನೀಡಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.